## ನೀವು ಕೇಳಿದಿರಿ?

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ನಾರದನಿಗೂ, ಇಂದಿನ ಪತ್ರಕರ್ತನಿಗೂ ಏನು ವ್ಯತ್ಯಾಸ?




ನಾರದ ಸಂಬಳ, ಗಿಂಬಳ ಇಲ್ಲದೆ ಲೋಕಕಲ್ಯಾಣಕ್ಕಾಗಿ ದುಡಿದ ವರದಿಗಾರ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಹೆಣ್ಣನ್ನು ನದಿಗೆ ಹೋಲಿಸಿದರೆ ಗಂಡನ್ನು?
ಅದು ಒಯ್ದಂತೆ ಸಾಗುವ ತೆಪ್ಪಕ್ಕೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಸಂಸಾರಕ್ಕೂ, ಸಂಸ್ಕಾರಕ್ಕೂ ವ್ಯತ್ಯಾಸವೇನು?
ಸಂಸಾರ ಬೇಸಿಕ್ ಕರೆನ್ಸಿ; ಸಂಸ್ಕಾರ ಟಾಪಪ್!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಅವಮಾನಕ್ಕೂ, ಅನುಮಾನಕ್ಕೂ ಏನು ವ್ಯತ್ಯಾಸ?
ಅನುಮಾನ ವರ್ಚಸ್ಸಿನ ಒರೆಗಲ್ಲು; ಅವಮಾನ ಸರಿದಾರಿಗೆ ಮಾರ್ಗಸೂಚಿ.

ಬಾ.ರಂ. ಸುರೇಶ್, ಶಿವಮೊಗ್ಗ
ಜೀವನ ಸಂಗಾತಿ ಎಂದರೆ ಹೇಗಿರಬೇಕು?



ಬದುಕನ್ನು ಜೀವಕಳೆಯಿಂದ ತುಂಬಿದ ವನವಾಗಿಸುವಂತೆ ಇರಬೇಕು.

ಬಿ.ಎಸ್.ನಾರಾಯಣಸ್ವಾಮಿ, ಬಿ.ಹೊಸಹಳ್ಳಿ
ತಾನು ಪ್ರೀತಿಸುತ್ತಿದ್ದ ಹುಡುಗಿಯ ಕೈ ಹಿಡಿಯದೆಹೋದರೆ ಹುಡುಗಿ ಅವನನ್ನು ಕಾಲಿನಿಂದ ಒದ್ದಳಲ್ಲ...?
ಅವಳೇನೂ ಪ್ರೀತಿಸಿರಲಿಲ್ಲವಲ್ಲ! ಒನ್ ವೇ ರಸ್ತೆಯಲ್ಲಿ ಹೋದರೆ ಅಪಘಾತ ಖಚಿತ.

ಬಿ. ಚಂದ್ರೇಗೌಡ, ಬೆಂಗಳೂರು
ಏಕಾಂತಕ್ಕೂ, ಏಕಾಂಗಿತನಕ್ಕೂ ಏನು ವ್ಯತ್ಯಾಸ?
ಏಕಾಂತ ಎಂದರೆ 'ಎ' ಕ್ಲಾಸ್ ಲವರ್; ಏಕಾಂಗಿ ಎಂದರೆ ಒಂದೇ ಷರ್ಟ್ ಇರುವವನು.

ದಿನೇಶ್, ಗುಡ್ಡದೂರು
ಮಠಾಧೀಶರಿಗೂ, ರಾಜಕಾರಣಿಗೂ ಇರುವ ವ್ಯತ್ಯಾಸವೇನು?
ಮಠಾಧೀಶರು ಸಾಮಾನ್ಯವಾಗಿ ಗೌರವಕ್ಕೆ ಅರ್ಹರು.

ಕೆ.ಎಂ. ವಿಭೂತಿ, ಹರಿಹರ
ಶಾಸ್ತ್ರಿಗಳಿಗೂ, ಶಾಸ್ತ್ರಕ್ಕೂ ಎಂತಹ ಸಂಬಂಧವಯ್ಯ?
ಎಲೆಕ್ಟ್ರಿಷಿಯನ್ನಿಗೂ ವೈರ್‌ಗೂ ಇರುವ ಸಂಬಂಧವೇ – ಅವರದು ಆಧ್ಯಾತ್ಮಿಕ ವೈರಿಂಗ್.

ಮಹಾವೀರ ಕಾಸರ. ಶಿವಮೊಗ್ಗ
ಹೆಂಡತಿ ಮತ್ತು ಪ್ರೇಯಸಿ ಒಂದೆಡೆ ಸೇರಿದರೆ ಏನಾಗಬಹುದು?
ಗಂಡ/ನಲ್ಲನಿಗೆ ಅಂದಿನಿಂದ ಸರೌಂಡ್ ಸೌಂಡ್ ಎಫೆಕ್ಟ್.

ಪಿ. ಶಂಕರಪ್ಪ, ಶಿವಮೊಗ್ಗ
ಲಂಚಾವತಾರ ದೇಶವ್ಯಾಪಿಯಾಗಿರುವಾಗ ದೇಶದಲ್ಲಿ ಬದಲಾವಣೆ ತರುವ ಮಾರ್ಗ ಯಾವುದು?
ಕಡಿಮೆ ಹಣ ಕೊಟ್ಟವರಿಗೆ ವೋಟ್ ಹಾಕುವುದರಿಂದ ಪ್ರಾರಂಭಿಸಿ.

ಎಸ್. ಶರತ್, ಬೆಂಗಳೂರು
ವಯಸ್ಸಾದ ಮೇಲೇ ಒಂದೊಂದಾಗಿ ಕಾಯಿಲೆಗಳು ಹೆಚ್ಚಾಗಿ ವಕ್ಕರಿಸಲು ಕಾರಣ?
ಅದು ವಯಸ್ಸಿನಲ್ಲಿ ದೇಹವನ್ನು ದಂಡಿಸದಿದ್ದುದಕ್ಕೆ ದೇಹವು ನಮ್ಮನ್ನು ದಂಡಿಸುವ ಪರಿ.

ಜಿ. ಪ್ರದೀಪಕುಮಾರ್, ಹೂವಿನಹಡಗಲಿ
ಆಗಿನ ಚಡ್ಡಿ ದೋಸ್ತ್‌ಗಳಿಗೂ, ಈಗಿನ ಎಫ್‌ಬಿ, ವಾಟ್ಸ್‌ಆ್ಯಪ್ ಫ್ರೆಂಡ್ಸ್‌ಗಳಿಗೂ ವ್ಯತ್ಯಾಸ?
ಅವರು ಹೆಗಲು ಜೋಡಿಸುತ್ತಿದ್ದರು, ಇವರು ಇಮೋಜಿಗಳನ್ನು ಜೋಡಿಸುತ್ತಾರೆ.

ವಿ. ಹೇಮಂತಕುಮಾರ್, ಬೆಂಗಳೂರು
ಚುಟುಕಿಗೂ, ಹನಿಗವನಕ್ಕೂ ವ್ಯತ್ಯಾಸವೇನು?
ಅಳತೆಯಲ್ಲಿ ಚಿಕ್ಕದಿದ್ದರೆ ಚುಟುಕು; ಗುಣಮಟ್ಟದಲ್ಲಿ ಹಿರಿದಾಗಿದ್ದರೆ ಹನಿಗವನ.

### ಬಹುಮಾನಿತ ಪ್ರಶ್ನೆ

ಮೋಹನರಾಜು ಎಸ್.ಎ., ಶಂಕರಘಟ್ಟ
ಮೂರ್ಖರು ಮನೆ ಕಟ್ಟುತ್ತಾರೆ, ಜಾಣರು ಅದರಲ್ಲಿ ವಾಸಿಸುತ್ತಾರೆ ಎನ್ನುವುದು ಸರಿಯೆ?
ಈಗ ಜಾಣರು ರಾಜಕಾಲುವೆಯ ಮೇಲೆ ಮನೆ ಕಟ್ಟುತ್ತಾರೆ, ಮೂರ್ಖರು ಕೊಳ್ಳುತ್ತಾರೆ.

ರಮೇಶ್, ಹನುಮನಾಳು
ಯಾರೂ ಕೇಳದ ಅತ್ಯುತ್ತಮ ಪ್ರಶ್ನೆ ಕೇಳಬೇಕೆಂದರೆ ಪ್ರಶ್ನೆಯೇ ಹೊಳೆಯುತ್ತಿಲ್ಲವಲ್ಲ...?
ಮಕ್ಕಳೊಡಗೂಡಿ. ಅವರಿಗೆ ಹೊಳೆಯುವಷ್ಟು ಪ್ರಶ್ನೆಗಳು ವಿಜ್ಞಾನಿಗೂ ಹೊಳೆಯುವುದಿಲ್ಲ.

ಶಿವಣ್ಣ ಕೆ ರಾಮಗುಂಡಿ, ಬೈಲಹೊಂಗಲ
ಸಂಬಂಧಗಳು ಗಟ್ಟಿಗೊಳ್ಳಲು ಏನು ಮಾಡಬೇಕು?
ವಿಶ್ವಾಸವೆಂಬ ಫೆವಿಕಾಲನ್ನು ಹೆಚ್ಚಾಗಿ ಬಳಸಬೇಕು.

ಎಸ್.ಎನ್.ಮಹಾಬಲರಾವ್, ಎನ್ನಾರ್ಪುರ
ಹಡಗು ಲಂಗರು ಹಾಕಿದೆ?



ಅಲೆ–ದಾಟಕ್ಕೆ ತೆರೆ(ದ) ಬಾಹುಗಳಿಂದ ಕರೆಯುವ ಸಾಗರನ ಸಹವಾಸ ಸಾಕೆನಿಸಿದೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ವಿವಾಹಿತ ಗಂಡು ತನ್ನ ಗೆಳೆಯನಿಗೆ ಮದುವೆ ಬೇಡವೆನ್ನುವನು. ಆದರೆ ವಿವಾಹಿತ ಹೆಣ್ಣು ಗೆಳತಿಗೆ ಹಾಗೆನ್ನಳಲ್ಲ?
ಆನೆಗೆ ರಿಂಗ್‌ಮಾಸ್ಟರ್ ಕೇಡೆನಿಸೀತು. ರಿಂಗ್‌ಮಾಸ್ಟರ್‌ಗೆ ಆನೆಯಾಟ ಪ್ರಿಯ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ಉತ್ತಮ ಸಾಹಿತಿ ಎನ್ನಿಸಿಕೊಳ್ಳಲು ಏನು ಬರೆಯಬೇಕು?
ಕೇವಲ ಎನ್ನಿಸಿಕೊಳ್ಳಬೇಕೆಂದರೆ ಪೇಯ್ಡ್ ನ್ಯೂಸ್ ಅಂಕಣಕ್ಕಾಗುವಷ್ಟು ಚೆಕ್ ಬರೆದರೆ ಸಾಕು.

■ ರಾಮ್